**<u>ಸಿವಿಲ್ ಜಡ್ಜ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಮುಂಡಗೋಡ.</u>**

**<u>ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 400/2022</u>**

**ಫಿರ್ಯಾದುದಾರರು**

ಡಾಃ ಬಿ.ಆರ್. ಅಂಬೇಡ್ಕರ ವಿವಿದೋದ್ದೇಶ ಸಹಕಾರಿ ಸಂಘ
ನಿಯಮಿತ ಮುಂಡಗೋಡ, ಉತ್ತರ ಕನ್ನಡ,
ನಿಷ್ಪತ್ ಮುಖ್ಯ ಕಾರ್ಯನಿರ್ವಾಹಕರು,
ಶ್ರೀ ಮಂಜುನಾಥ ತಂದೆ ನೀಲಪ್ಪ ಹರಿಜನ್,
ಪ್ರಾಯಃ 32 ವರ್ಷಗಳು, ಸಾಃ ಕಿಲ್ಲೆ ಓಣಿ,
ತಾಃ ಮುಂಡಗೋಡ, ಜಿಃ ಉತ್ತರ ಕನ್ನಡ.

**– ವಿರುದ್ಧ –**

**ಆರೋಪಿತರು**

ಶ್ರೀ. ಮಂಜುನಾಥ ದೇವೇಂದ್ರಪ್ಪ ಹರಿಜನ,
ಪ್ರಾಯಸ್ಥ, ಉಃ ಕೂಲಿ,
ಸಾಃ ನಂದಿಕಟ್ಟಾ, ಅಂಚೆ: ನಂದಿಕಟ್ಟಾ
ತಾಃ ಮುಂಡಗೋಡ, ಉ.ಕ.,

**<u>ಆಪಾದನೆ.</u>**

ಆರೋಪಿತರಾದ ನೀವು ಪಿರ್ಯಾದುದಾರರ ಸಂಘದಲ್ಲಿ ಸದಸ್ಯನಿದ್ದು, ಆರೋಪಿತನಾದ ನೀವು ನಿಮ್ಮ ವೈಯಕ್ತಿಕ ವ್ಯವಹಾರದ ಸಲುವಾಗಿ ಹಣಕಾಸಿನ ಆಡಚಣೆ ನೀಗಿಸಿಕೊಳ್ಳುವ ಸಲುವಾಗಿ ಫಿರ್ಯಾಧಿದಾರರ ಸಹಕಾರಿ ಸಂಘದಲ್ಲಿ ಸಾಲವನ್ನು ದಿನಾಂಕ 11-09-2018 ರಂದು ರೂ.30,000/-ಗಳನ್ನು ಪಡೆದಿದ್ದು, ಸಂಘದ ನೀತಿ ನಿಯಮಾವಳಿಗಳ ಪ್ರಕಾರ ಜಾಮೀನು ಭದ್ರತೆಯನ್ನು ನೀಡಿದ್ದಲ್ಲದೇ, ಕರಾರು ಒಡಂಬಡಿಕೆಯನ್ನು ಸಂಘಕ್ಕೆ ಬರೆದುಕೊಟ್ಟಿರುತ್ತಾರೆ, ತದನಂತರ ನಿಗಧಿತ ಸಮಯಕ್ಕೆ ಸದ್ರಿ ಸಾಲದ ಹಣವನ್ನು ಮರು ಪಾವತಿ ಮಾಡದೇ ಇದ್ದ ಕಾರಣ, ಕೊನೆಗೆ ಸದ್ರಿ ಸಾಲದ ಹಣವನ್ನು ಮರು ಪಾವತಿಗಾಗಿ ಪಿರ್ಯಾದುದಾರರು ನಿಮ್ಮನ್ನು ದಿನಾಂಕ 22-07-2021 ರಂದು ಸಂಪರ್ಕಿಸಿದಾಗ ನೀವು ಅವರ ಮಾತಿಗೆ ಒಪ್ಪಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ನಂದೀಕಟ್ಟಾ ಶಾಖೆಯಲ್ಲಿ ತಾವು ಹೊಂದಿರುವ ಖಾತೆಯ ಚೆಕ್ ನಂ.001706, ದಿನಾಂಕಃ 23-07-2021 ರಂದು ಒಟ್ಟು ರೂ.38,890.00/-ಗಳ ಮೊತ್ತಕ್ಕೆ ಚೆಕನ್ನು ನೀಡಿರುತ್ತೀರಿ, ತದನಂತರ ತಮ್ಮ ಭರವಸೆಯ ಮೇರೆಗೆ ಫಿರ್ಯಾದಿದಾರರ ಸಂಘವು ಅದೇ ದಿನ ನಗಧೀಕರಣಕ್ಕಾಗಿ ತಮ್ಮ ಖಾತೆ ಹೊಂದಿರುವ ಕೆ.ಡಿ.ಸಿ.ಸಿ. ಬ್ಯಾಂಕ್ ಮುಂಡಗೋಡ ಶಾಖೆಗೆ ಚೆಕನ್ನು ಹಾಜರಪಡಿಸಿದಾಗ, ಸದ್ರಿ ಬ್ಯಾಂಕನವರು ನಿಮ್ಮ "ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ" ಎಂದು ದಿನಾಂಕಃ 27-0-2021 ರಂದು ಮೆಮೋದೊಂದಿಗೆ ವಾಪಸ್ಸ ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 05-08-2021 ರಂದು ತಮ್ಮ ವಕೀಲರ ಮೂಲಕ ನೋಟಸ್ ನ್ನು ನಿಮಗೆ ನೀಡಿದ್ದರೂ, ಅದು ನಿಮ್ಮಗೆ ಜಾರಿಯಾಗಿದ್ದರೂ ಸಹ ನಿಗದಿತ ದಿನದೊಳಗೆ ಹಣ ವಾಪಸ್ ಮಾಡಿರುವುದಿಲ್ಲ ಎಂದು ನೆಗೋಶಿಯೆಬಲ್ ಇನ್‌ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ –

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ –

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿಃ – –2026

ಸಿವಿಲ್ ಜಡ್ಜ ಮತ್ತು ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳು,
ಮುಂಡಗೋಡ.